**ಕಥೆ**

ನಿಂತಿದ್ದ.

ಎಸ್ಪಿ ಸಾಹೇಬರ ಮುಂದೆ ಶಫಿ ಶಂಕರಪ್ಪರ ಮೇಲೆ ಇಲ್ಲ ಸಲ್ಲದ ಆಪಾದನೆ ಮಾಡಿದ. 'ನಮ್ಮ ಹೊಲನ ಇವ್ರೇ ಹೊಡ್ಕಳ್ಳಾಕೆ ನೋಡ್ತದಾರೆ. ನಮ್ಮವ್ವಗೆ ವಯಸ್ಸಾಗೇತಿ, ತೆಲಿ ಸರಿ ಇಲ್ಲ, ನಮ್ಮವ್ವನ ತೆಲಿ ಸವರಿ ಹೊಲದ ಪತ್ರ ಇವ್ರೇ ಇಸ್ಕೊಂಡಾರ. ಕೇಳಿದ್ರೆ ನನ್ ಮ್ಯಾಲೇ ಜಬರ್‌ದಸ್ತಿ ಮಾಡ್ತಾರ' ಅಂದ.

ತಂಜಿಂ ಕಮಿಟಿ ಮುಖಂಡರು 'ಇದು ಸರಿಯಲ್ಲ ಸಾಹೇಬ್ರೆ, ಅಧಿಕಾರ ಐತಂತ ಬಡರ ಹೊಟ್ಟಿಮ್ಯಾಲ ಹೊಡೀಬಾರ್ದು. ಇದ್ನೆಲ್ಲ ನೋಡ್ಕೊಂಡು ನಾವು ಸುಮ್ನಿರಲ್ಲ. ನಮ್ ಜನ ಸೇರುಸ್ತೀವಿ, ಏನೇ ಆದ್ರು ನೀವೇ ಜವಾಬ್ದಾರಿ' ಎಂದರು.

ಶಂಕರಪ್ಪ ಸಮಾಧಾನ ರೀತಿಯಲ್ಲಿ ಎಸ್ಪಿ ಸಾಹೇಬರಿಗೆ ಎಲ್ಲವನ್ನೂ ವಿವರಿಸಿ ಹೇಳಿದರು. 'ನೋಡ್ರಿ ಸಾಹೇಬ್ರ ಹುಸೇನವ್ವನ ಹೊಲ ತಗಂಡು ನನಗೇನೂ ಆಗ್ಬೇಕಿಲ್ಲ. ಖಾಸೀಮ ಅಂದ್ರೆ ಇವನಪ್ಪ ಬದುಕಿದ್ದಾಗ ಅದ್ನ ನಾನೇ ಅವ್ನಿಗೆ ಕೊಡ್ಸೇನಿ. ಆಗ ಈ ಶಫಿ ಅನ್ನೋನು ಹುಟ್ಟೇ ಇರ್ಲಿಲ್ಲ. ನನಗೆ ನನ್ನ ಹೊಲ, ತ್ವಾಟನೇ ರಗಡದಾವು, ಬೇರೇರ ಆಸ್ತಿ ನನಗ್ಯಾಕೆ ಬೇಕು, ಈ ಶಫಿ ಇಸ್ಪೇಟ್‌ನಾಗೆ ಸೋತು ಸುಣ್ಣಾಗಿ ಈಗ ಅವರವ್ವನ ಹೆಸರಿನಾಗಿರೋ ಹೊಲಕ್ಕೆ ಗಂಟು ಬಿದ್ದಾನ. ಮೊನ್ನಿ ರೌಡಿಗಳನ್ನ ಬಿಟ್ಟು ಹೆತ್ತ ಅವ್ವನ್ನೇ ಹೊಡೆಸ್ಯಾನ. ಈಗಕಿ ಆಸ್ಪತ್ರಿ ಸರ‍್ಯಾಳ. ಇವ್ನು ಈ ತರ ಮಾಡಿದ್ದು ಇದೇ ಮೊದ್ಲಲ್ಲ. ಹಿಂದಕೆ ಬಾಳ ಸಲ ಆಗೇತಿ. ಆ ಕಾರಣಕ್ಕೇ ಜೀವಭಯದಿಂದ ಹುಸೇನವ್ವ ಪತ್ರನ ನನ್ ಕಡಿಗೆ ಕೊಟ್ಟದ್ದು ಖರೆ ಐತಿ. ಅದನ್ನ ಹುಸೇನವ್ವನ ಕಡಿಗೇ ವಾಪಾಸ್ ಕೊಟ್ಟೇನಿ...'



ಎಂದರು.

'ಸುಳ್ಳು' ಎಂದ ಶಫಿ. 'ಇವರು ಸುಳ್ಳು ಹೇಳ್ತದಾರ, ಪತ್ರ ಇವರತ್ರಾನೇ ಐತಿ' ಎಂದು ವಾದಿಸಿದ. ತಂಜೀಂ ಮುಖಂಡರೂ ಏನೋ ತಕರಾರು ತೆಗೆದರು.

'ಹುಸೇನವ್ವ ಆಸ್ಪತ್ರಿಲದಾಳ, ಹೋಗಿ ಕೇಳ್ರಿ ಸಾಹೇಬ್ರೆ' ಎಂದ ಶಂಕರಪ್ಪ, 'ಅಷ್ಟಕ್ಕೂ ಅದೇನ್ ಬೆಳ್ಳಿ ಬಂಗಾರನಾ? ಸಬ್‌ರಿಜಿಸ್ಟರ್ ಆಫೀಸಿಗೆ ಅರ್ಜಿ ಹಾಕಿದ್ರೆ ಇನ್ನೊಂದ್ ಪತ್ರ ಕೊಡ್ತಾರ' ಎಂದರು.

ಅಷ್ಟರಲ್ಲಿ ಬಾಗಿಲ ಹತ್ರ ಏನೋ ಗಲಾಟಿ ಆದಂತಾಗಿ ಎಸ್ಪಿ ಸಾಹೇಬರು ಬೆಲ್ ಮಾಡಿದರು. ಒಳಕ್ಕೆ ಬಂದ ಕಾನ್‌ಸ್ಟೇಬಲ್ 'ಸರ್, ಯಾರೋ ಹುಸೇನವ್ವಂತೆ, ಜತಿಗೆ ಕೆಲವರನ್ನ ಕರ್ಕಂಡ್ ಬಂದಾರ' ಅಂದ.

'ಅದೇ, ಅದೇ ಹುಸೇನವ್ವ ಇರಬೇಕು, ಒಳಕ್ಕೆ ಕರೆಸ್ರಿ' ಅಂದರು ಶಂಕರಪ್ಪ.

ಒಂದು ಕೈಯಲ್ಲಿ ಪತ್ರ ಹಿಡ್ಕೊಂಡಿದ್ದ ಹುಸೇನವ್ವನ್ನ ಊರಿನ ಕೆಲವರು ಕೈ ಹಿಡಿದು ಒಳಕ್ಕೆ ನಡೆಸಿಕೊಂಡು ಬಂದರು. ಹಣೆಯ ಮ್ಯಾಗಿನ ಬ್ಯಾಂಡೇಜಲ್ಲಿ ರಕ್ತದ ಕಲೆ ಇನ್ನೂ ಹಾಗೇ ಇತ್ತು. ಕಷ್ಟಪಟ್ಟು ಕುರ್ಚಿಯ ಮ್ಯಾಲೆ ಕೂತ ಹುಸೇನವ್ವ, ಸುಧಾರಿಸಿಕೊಂಡು ಕಚೇರಿ ಒಳಗಿದ್ದ ಎಲ್ಲರ ಮುಖಗಳನ್ನೂ ಒಮ್ಮೆ ದಿಟ್ಟಿಸಿ ನೋಡಿದಳು. ಆಮೇಲೆ ಸಾವಕಾಶ ಎದ್ದು ಕೈಲಿದ್ದ ಹೊಲದ ಪತ್ರನ ಎಸ್ಪಿ ಸಾಹೇಬರ ಮುಂದಿಟ್ಟಳು. ನಂತರ ಇದ್ದಕ್ಕಿದ್ದಂತೆ ಆವೇಶ ಬಂದವಳಂತೆ ಶಫಿಯ ಕಡೆಗೆ ಬೆರಳು ತೋರ್‍ಸಿ 'ಸಾಹೇಬ್ರೆ ಮೊದ್ಲು ಅವನನ್ನ ಅರೆಸ್ಟ್ ಮಾಡ್ರಿ' ಎಂದಳು. ಒಂದು ಕ್ಷಣ ಎಲ್ಲ ಕಕ್ಕಾಬಿಕ್ಕಿಯಾದರು. 'ನನ್ನ ಕೊಲಿ ಮಾಡ್ತಾನವ, ಈ ಹೊಲದ ಸಂಬಂಧ ನಂಗೆ ಕೊಡಬಾರದ ಕಷ್ಟ ಕೊಟ್ಟಾನ. ಯಾವ ಹೊತ್ತಿನಾಗೆ ಏನು ಮಾಡ್ತಾನೋ ಗೊತ್ತಿಲ್ಲ. ನೋಡ್ರಿ ನನ್ನ ತೆಲಿ ಒಡದಾನ. ರೌಡಿಗಳನ್ನ ತಂದು ನನ್ನ ಅಂಗಡಿ, ಕುರಿ, ಕೋಳಿ ಎಲ್ಲ ಧ್ವಂಸ ಮಾಡ್ಯಾನ' ಎಂದಳು.

'ಸ್ವಲ್ಪ ತಡೀರಿ' ಎಂದರು ಎಸ್ಪಿ. ಇಲ್ಲಿ ಕಂಪ್ಲೇಂಟ್ ಇರೋದು ಶಂಕರಪ್ಪನೋರು ಜಬರ್‌ದಸ್ತಿ ಮಾಡಿ ನಿಮ್ಮ ಹೊಲದ ಪತ್ರ ಕಸ್ಕಂಡಾರೆ ಅಂತ. ಇದಕ್ಕೆ ನೀವೇನೇಳ್ತೀರಿ?'

'ಮತ್ತ ಇಂಥ ಮಗ ಹುಟ್ಯಾನಲ್ಲ ಸಾಹೇಬ್ರೆ, ಇವನ ಕೈಗೆ ಸಿಗಬಾರ್ದು ಅಂತ ಪತ್ರನ ನಾನೇ ಅಪ್ಪಾರ ಕಡಿ